Doc-45
T-P.2

R No KKNN 12

12-3-1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಪ್ರಕಾಶಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬಯ್ಯ ಸಂಪಾದಕರು ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ 3 ಕ.ಸ

ಗಡಿನಾಡ್ ಶಿಖರದಲ್ಲಿ 27 ಜನರ ಸಾವು

ಪಾಟೀಲರ ವಿನಂತಿ

ಬೆಂಗಳೂರು — ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹೆಚ್. ಪಾಟೀಲರು, ಶಾಸನ ಸಭೆಯಲ್ಲಿ ತನ್ನ ಮೇಲೆ ಮಾಡಲಾಗಿರುವ ಭ್ರಷ್ಟಾಚಾರ ಆಪಾದನೆ ಕುರಿತು ವಿಚಾರಣೆಗೆ ಒಂದು ಆಯೋಗ ನೇಮಿಸುವಂತೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರೂವಾರನ್ನು ಕಾಂಗ್ರೆಸ್ ಸಭೆಯಲ್ಲಿ ವಿನಂತಿಸಿದರು

★

ಅನುಮತಿ ನಿಕ್ಕಿ

ನವ ದೆಹಲಿ — ಪಾರ್ಲಿಮೆಂಟಿನ ಎರಡು ಸಭೆಗಳಲ್ಲಿ ಮಂಡಿಸಲಾದ ಆಸ್ತಿ ಮೊಸೂಬೆಗೆ ರಾಷ್ಟ್ರಪತಿಯವರು ತಮ್ಮ ಅನುಮತಿ ನೀಡಿದರು.

●

ಗರ್ಭ ಪ್ರತಿಬಂಧಕ

ನವ ದೆಹಲಿ — ಒಂದು ವರ್ಷ ಕಾಲ ಗರ್ಭ ಪ್ರತಿಬಂಧಿಸುವದನ್ನು ಧೃವೀಕರಿಸಲು ದಿಲ್ಲಿರುವ ಟಿಬೆಟ್ ವೈದ್ಯಕೀಯ ಕೇಂದ್ರದ ಡಾ|| ಲೋಬ ಸಂಗ್‌ಡೊ ಸಂಶೋಧನೆ ಮಾಡಿರುವರು.

★

ವರದಕ್ಷಿಣೆಗೆ ವಿರೋಧ

ಗೋಂಡ (ಉ ಪ್ರ) — ಅಪ್ಪಾ ಗ್ರಾಮದಲ್ಲಿ ವಿವಾಹ ಸಂಬಂಧದಲ್ಲಿ ವರ ಪೂಜೆ ಕಾಲದಲ್ಲಿ ವರನ ತಂದೆ ವರದಕ್ಷಿಣೆ ಕೇಳಲು, ಹರಿಜನ ವಧು ರಾಧಿಕಾ ಮನೆಯಿಂದ ಹೊರಬಂದು ವರನ ಕಡೆಯವರನ್ನು ಹೊರಹೋಗಿಸಿದಳು

★

ಡಾಕಾ — ಇಲ್ಲಿಯ ಮೆಡಿಕಲ್ ಕಾಲೇಜಿನಲ್ಲಿ ಶಸ್ತ್ರ ಚಿಕಿತ್ಸೆ ಇಲ್ಲದೆ 12 ವರ್ಷದ ಓರ್ವ ಹುಡುಗ ಹುಡ್ಗಿಯಾಗಿ ಆಗಳು

ಋಣಾನಿಧಿ ಹೇಳಿಕೆ

ಮದರಾಸು — ರಾಜ್ಯದ ಸ್ವಾತಂತ್ರ್ಯಕ್ಕೆ ಪಾರ್ಲಿಮೆಂಟರಿ ಹಾಗೂ ರಾಜ್ಯಾಂಗ ಮಾರ್ಗಗಳನ್ನು ಡಿ.ಎಂ.ಕೆ ಅನುಸರಿಸುತ್ತಿದ್ದರೂ, ಕೇಂದ್ರವು ವಿನಂತಿಗಳ ವಿಚಾರದಲ್ಲಿ ತಿರಸ್ಕಾರ ಧೋರಣೆ ಅನುಸರಿಸುವುದನ್ನು ಮುಂದುವರಿಸಿದರೆ ತಾವು ಬೇರೆಯ ಮಾರ್ಗ ಕ್ಕೆಗೊಳ್ಳಬೇಕಾಗುವುದೆಂದು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ತಿಳಿಸಿದರು

○

ಹೊಸ ಪಕ್ಷಿಗಳು

ಮೈಸೂರು — ಕೃಷ್ಣರಾಜಸಾಗರದಲ್ಲಿ ನೂರು ನಸುಗೆಂಪಿನ ಕಾಲುಗಳ ಪಕ್ಷಿಗಳು ಕಾಣಬಂದವು ಈ ಪಕ್ಷಿಗಳು ಸೈಬೀರಿಯದವಾಗಿದ್ದು, ಬೊಂಬಾಯಿನ ವರೆಗೆ ಬರುತ್ತಿದ್ದುದು ದಾಖಲಾಗಿದ್ದರೂ ಇಲ್ಲೇ ವರೆಗೆ ಬಂದಿರುವುದು ಇದೇ ಪ್ರಥಮವಾಗಿದೆ

★

5 ದಿನ ಹರತಾಳ

ಹುಬ್ಬಳ್ಳಿ — ಇಲ್ಲಿಯ ಹತ್ತಿ ಸಂಬಂಧ ಕಾರ್ಖಾನೆಗಳಲ್ಲಿಯ ಹತ್ತಿ ವ್ಯಾಪಾರಿಗಳು ಮತ್ತು ಕಮಿಷನ್ ಏಜೆಂಟರು, ಹತ್ತಿಯ ಉತ್ಪಾದನೆ ಮೇಲೆ ಶೇಕಡ 1 ಆಬ್ಕಾರಿ ತೆರಿಗೆ ಪ್ರತಿಭಟಿಸಿ ಇಂದಿನಿಂದ 5 ದಿನಗಳ ಹರತಾಳ ಘೋಷಿಸಿರುವರು.

●

ವರ್ಗಾವಣೆ

ಬೊಂಬಾಯಿ — ಗುಜರಾತಿಗೆ ಅಕ್ಕಿ ಮತ್ತು ಇತರ ಆಹಾರ ಧಾನ್ಯಗಳ ಅಕ್ರಮ ಸಾಗಾಣಿಕೆಗೆ ಕಾರಣರಾದ ಓರ್ವ ಮಹಾರಾಷ್ಟ್ರ ಜಿಲ್ಲ ಪೋಲೀಸು ಸೂಪರಿನ್‌ಟೆಂಡೆಂಟರನ್ನು ವರ್ಗಾಯಿಸಲಾಯಿತು ಈ ಸಂದರ್ಭದಲ್ಲಿ 4 ಸಬ್ ಇನ್ಸ್‌ಪೆಕ್ಟರುಗಳು ಪದಗಾಯಿಸಲ್ಪಟ್ಟರು ಅಥವಾ ಸಸ್ಪೆಂಡ್ ಆದರು

ಜಯಪ್ರಕಾಶರ ಕರೆ

ಸಾತ್ನಾ (ಮ ಪ್ರ) — ವಾರ್ಧಕ್ಕೆ ಹೋಗುವ ಮಾರ್ಗದಲ್ಲಿ ಈ ಮೂಲಕ ಹೋಗುತ್ತಿದ್ದ ಜಯಪ್ರಕಾಶ ನಾರಾಯಣರನ್ನು ಹತ್ತಿರ ನೋಡಲು ಪೋಲೀಸರ ರಕ್ಷಣೆಯನ್ನು ಮುರಿದು ಗುಂಪು ನುಗ್ಗಿದುದರ ಕುರಿತೂ ಜಯಪ್ರಕಾಶರು ಮನನೊಂದು ಶಿಕ್ಷ ಅನುಸರಿಸಬೇಕೆಂದು ತಿಳಿಸಿದರು ಜಬ್ಬಲ್ಪುರದಲ್ಲಿ ಅವರು ಭಾಷಣ ಮಾಡುತ್ತಾ, ತಮ್ಮ ಚಳವಳಿ ಚುನಾವಣೆ ಗೆಲ್ಲುತ್ತಿದ್ದಲ್ಲವೆಂದು, ಸರ್ಕಾರ ಬದಲಾವಣೆ ಮಾಡಿಕೊಳ್ಳುತ್ತಿದ್ದಲ್ಲವೆಂದು, ಜನತೆಯನ್ನು ಜಾಗೃತಗೊಳಿಸಿ ಮತ್ತು ಹೃದಯವನ್ನು ಒಳಿತಕ್ಕೆ ಪರಿವರ್ತಿಸುವುದು ಆಗಿದೆ ಎಂದು ನುಡಿದರು

★

27 ಮಂದಿಯ ಸಾವು

ರಾಜಕೋಟೆ — ಗಿರನಾರ್ ಶಿಖರದ ಮೇಲಿರುವ ಭವನನಾಥ್ ಸ್ವಾಮಿ ದೇವಾಲಯಕ್ಕೆ ಮಹಾ ಶಿವರಾತ್ರಿ ಪ್ರಾರ್ಥನೆ ಸಲ್ಲಿಸಲು ಹೋಗುತ್ತಿದ್ದ ಯಾತ್ರಿಕರಲ್ಲಿ ನೂಕುನುಗ್ಗಲು ಆಗಿ ಒಂದು ರಕ್ಷಣಾ ಗೋಡೆ ಕುಸಿಕುಸಿದಿಂದ 27 ಮಂದಿ ಗತಪ್ರಾಣರಾದರು

○

ಖಂಡಿತ ಕ್ರಮ

ನವ ದೆಹಲಿ — ಕಾವೇರಿ ನೀರಿನ ವ್ಯಾಜ್ಯ ಪರಿಹರಿಸಲು ಕೇಂದ್ರ ಮತ್ತೆ ಪ್ರಯತ್ನಿಸಲಿರುವುದಾದರೂ, ನ್ಯಾಯಾಂಗ ಮಂಡಲಿಗೇ ಹೋಗುವದು ಖಚಿತವೆನ್ನಲಾಗಿದೆ

○

ಪೋಲೀಸರ ಸಸ್ಪೆಂಡ್

ಕಲ್ಕತ್ತಾ — ಫೆ|| 5 ರಂದು ರೂರ್ಕೆಲಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಆದ ದರೋಡೆ ಸಂದರ್ಭದಲ್ಲಿ, ಕೆಲಸದ ಮೇಲಿದ್ದ ನಾಲ್ವರು ಪೋಲೀಸರನ್ನು ಸಸ್ಪೆಂಡ್ ಮಾಡಿದೆ.

ಬ್ರಿಟನ್ ನೊಡನೆ ಒಪ್ಪಂದ

ನವ ದೆಹಲಿ — ಭಾರತಕ್ಕೆ ಬ್ರಿಟನ್ ನಿಂದ ಪ್ರಾಜೆಕ್ಟೇತರ ಪದಾರ್ಥಗಳ ಆಮದಿಗೆ 38 ಕೋಟಿ ರೂ ಸಾಲ ಮತ್ತು 4 ಕೋಟಿ ರೂಪಾಯಿ ಗಳ ಆಹಾರ ಧಾನ್ಯಗಳ ಆಮದಿಗೆ 2 ಒಪ್ಪಂದಗಳು ಆದವು.

●

ನಿರಾಕರಣೆ

ಇಸ್ಲಾಮಾಬಾದ್ — ಅಮೇರಿಕಾವು ಪಾಕೀಸ್ತಾನಕ್ಕೆ ಆಯುಧ ನೀಡುವುದಕ್ಕೆ ಪ್ರತಿಯಾಗಿ ಪಾಕೀಸ್ತಾನ ಅಮೇರಿಕಾಪ ಸೇನೆ ನಿಲ್ದಾಣಕ್ಕೆ ಅವಕಾಶ ಕೊಡಲು ಒಪ್ಪಿದೆ ಎನ್ನುವುದನ್ನು ಪ್ರಧಾನಿ ಭುಟ್ಟೋ ನಿರಾಕರಿಸಿದರು

●

ಸಜೀವ ದಹನ

ಮಧ್ಯಪ್ರದೇಶದ ಕೊಲೂಹಾ ಅರಣದಲ್ಲಿ ಶ್ರೀ ಲಂಕೇಶ್ವರಎಂಬಾತ ಕಾಂಟ್ರಾಕ್ಟರ್ ಮತ್ತು ಆತನ ಸೇವಕನನ್ನು ಧರಾಯಿತರು ಸಜೀವ ದಹನ ಮಾಡಿದರು. ಅವರ ತಲೆ ಬೆಲೆ ರೂ. 1 ಲಕ್ಷ ಕೇಳಲಾಗಿತ್ತು.

○

ಪಾಲ್ಕಿವಾಲ ಹೇಳಿಕೆ

ಬೊಂಬಾಯಿ — ಕೇಂದ್ರ ಅಂದಾಜಪಟ್ಟಿಯಲ್ಲಿ ಶೇಕಡ 1 ಅಬ್ಕಾರಿ ತೆರಿಗೆ ವಸೂಲಾತಿಯಿಂದ ರೂ. 24 ಕೋಟಿ ದೊರೆಯುವದೆನ್ನುವುದಾದರೂ ಹೊಸ ನೌಕರ ಜಾನೇರರಿಗೆ ರೂ. 12 ಕೋಟಿ ಖರ್ಚಾಗುವುದೆಂದು ಖ್ಯಾತ ನ್ಯಾಯವಾದಿ ಶ್ರೀ ಪಾಲ್ಕಿವಾಲ ತಿಳಿಸಿದರು ಮಾನವನ ಸಾಮರ್ಥ್ಯ ಬೆಲೆಬಾಳುವ ಕಾಲ ಸನ್ನಿವೆಂದರೂ ರೂಪಾಯಿ ಶೇಕಡ 43 ಬೆಲೆ ಕಳೆದುಕೊಂಡಿದೆ ಎಂದರು.

★ ಜಮ್ಮು–ಕಾಶ್ಮೀರದಲ್ಲಿ ಹಿಮ ಬೀಳುತ್ತಿದೆ

(2)

ಮದುಮಗಳ ವೇಷದಲ್ಲಿ ಕೈ ಹೋಮಿಸಿ ಎದುರಿಗೆ ನಿಂತವ್ರೊಬ್ರಿಗೆ ಅಕ್ಷತೆ ಕಾಳಿಯ ಆತೀರ್ನಾದವಿಸು

ಇಂದ್ರನಲ್ಲಿ ಶಚಿದೇವಿ, ಅಗ್ನಿಯಲ್ಲಿ ಸ್ವಾಹಾದೇವಿ, ವಿಷ್ಣುವಿನಲ್ಲಿ ಲಕ್ಷ್ಮಿ ಹೇಗೋ ಹಾಗೆ ನೀನು ನಿನ್ನ ಗಂಡಂದಿರ ವಿಷಯದಲ್ಲಿ ಭಾವಿಸುತ್ತೀಯೋ,

ಜೀವಶ್ಯಕಗಳನ್ನು ಹಣ್ಣೆ, ಪೀಠರಕ್ಷನ್ನು ಪೆರು, ಪತಿವ್ರತೆಯಾಗಿರು, ಸೌಖ್ಯ ಸೌಭಾಗ್ಯಗಳು ನಿನ್ನವಾಗಲಿ, ನಿನ್ನ ಪತಿಗಳು ಯಾಗಗಳನ್ನು ಮಾಡಲಿ,

ಅತಿಥಿ-ಅಭ್ಯಾಗತರ, ಸಾಧು-ಸಂತರ, ಎಳೆಯರ-ಮುದುಕರ, ಸೇವೆಯಲ್ಲೇ ನಿನ್ನ ಸಮಯ ಕಳೆಯಲಿ,

ಈ ಕುರುರಾಜ್ಯಕ್ಕೆ ನಿನ್ನ ಪತಿಯು ಅಧಿಪತಿಕ್ಷ ರಾಜನಾಗಲಿ

ಮಹಾಬಲಶಾಲಿಗಳಾದ ನಿನ್ನ ಗಂಡಂದಿರು ಗೆದ್ದು ತಂದ ಸಂಪತ್ತನ್ನು ಅಶ್ವಮೇಧ ಯಾಗದಲ್ಲಿ ಬ್ರಾಹ್ಮಣರಿಗೆ ದಾನಮಾಡು

ಮಂಗಳವೇಷದಲ್ಲಿರುವ ಈ ನಿನ್ನನ್ನು ನೋಡಿ ತುಂಬಾ ಸಂತಸವಾಯಿತು! ಒಳ್ಳೆಯ ಮಾತ್ಕಳನ್ನು ಹೆತ್ತು ಹೀಗೆಯೆ ಸಂತಸಪಡಿಸು (ಆದಿಪರ್ವ)

— ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ದಿವ್ಯವಾಣಿ

• ಬಲಯುತರಾದವರನ್ನು ನಿರ್ಬಲಗೊಳಿಸುವುದರಿಂದ, ನೀವು ನಿರ್ಬಲರನ್ನು ಬಲಯುತರನ್ನಾಗಿ ಮಾಡಲಾರಿರಿ ; ಕೂಲಿಕೊಡುವವನನ್ನು ಅಸಮರ್ಥಗೊಳಿಸುವುದರಿಂದ ನೀವು ಕೂಲಿ ಕೊಡುವವರಿಗೆ ಸಹಾಯಮಾಡಲಾರಿರಿ ; ಐಶ್ವರ್ಯವಂತರನ್ನು ಹಾಳುಮಾಡುವುದರಿಂದ ನೀವು ಬಡವರಿಗೆ ಸಹಾಯಮಾಡಲಾರಿರಿ.

— ಏಬ್ರಹಂ ಲಿಂಕನ್

ವುಡ್‌ಲಾಂಡ್ಸ್ 7 3 75 ರಿಂದ

ಅಮೋಘ 2 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ಕಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನಕ್ಕೆ ೪ ಪ್ರದರ್ಶನಗಳು

ಅಪೇರಾ 7 3 75 ರಿಂದ

ಅಪರಾಧಿ

★

ಅಮೋಘ ಹಿಂದಿ ಕಲರ್ ಚಿತ್ರ

ಪಾತ್ರ – ಯೋಗೀಶಬಾಲಿ ಕಿರಣಕುಮಾರ್ ದಿನಕ್ಕೆ ೩ ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

—Humanitarian Propoganda Monthly—

Edited Printed and Published by Dharmacharantrata M S Krishna Rao (Proprietor) at the Satyavadi Press, Chamarajapuram Mysore